153

ಸ್ ೧೮೯೫—೯೬ನೇ ಇಸವಿ ಅರ್ಜೀ ನಂಬರ್ 334.

ಮೃತಪಟ್ಟ ಕುಳ್ಳ ವೆಂಕಟಯ್ಯನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರು ಪುಟ್ಟಮ್ಮನವರು, ಮೃತಪಟ್ಟ ಸದರೀ ಕುಳ್ಳ ವೆಂಕಟಯ್ಯನವರಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ಮೈಸೂರ ಸ್ಥಳದ ಸದರೀ ಪುಟ್ಟಮ್ಮನವರು, ಸದರೀ ವಾಸಸ್ಥರಾಗಿ ಮೃತಪಟ್ಟ ಕುಳ್ಳ ವೆಂಕಟಯ್ಯನವರ ಜಿಂದಗಿ ಬಗ್ಗೆಗಿ ಬರತಕ್ಕ 500 ರೂಪಾಯಿ ಸ್ಥಲವನ್ನು ವಸೂಲ್ಮಾಡುವದಕ್ಕೆ ಸ್ ೧೮೬೦ನೇ ಇಸವಿ 27ನೇ ಆಕ್ಟ್ ಮೇರೆಗೆ ಸರಟಿಫಿಕೇಟ್ ಬಗ್ಗೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಪುಟ್ಟಮ್ಮನವರ ಅರ್ಜಿಯನ್ನು ಸ್ ೧೮೯೬ನೇ ಇಸವಿ ಫೆಬ್ರವರಿ ತಿಂಗಳ ತಾರೀಖು 13ರಲ್ಲು ಕೇಳಿ ಸರಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಚಾರ್ಸಿ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಕುಳ್ಳ ವೆಂಕಟಯ್ಯನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರಿ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸ್ ೧೮೯೬ನೇ ಇಸವಿ ಫಿಬ್ರವರಿ ತಿಂಗಳ 18ನೇ ತಾರೀಖಿನಲ್ಲಿ ಕೋರ್ಟಿನ ಮೊಹರ್ ನಿಶಾನಿ ನಮ್ಮದಸ್ತಖತ್ತೊಡನೆ ಕೊಡೋಣಾಗಿಧೆ.

ಎಂ. ರಾಮಸ್ವಾಮಯ್ಯರ್,
ಡಿಸ್ಟ್ರಿಕ್ಟ್ ಜಡ್ಜ್.

ಚಿತ್ರದುರ್ಗದ ಡಿಸ್ಟ್ರಿಕ್ಟ್.

ಇಸಿ ಹಾರ್‌ನಾಮೆ.

ತಾರೀಖು 10ನೇ ಫಿಬ್ರವರಿ 1896.

ಇದರಿಂದ ತಿಳಿಯಪಡಿಸುವದೇನಂದರೆ,—ಈ ಕೆಳಗೆ ವಿವರಿಸಿ ಇರುವ ರಿಜಸ್ಟರಾದ ದಸ್ತೈವಜುಗಳು ಯಾರಾ ವರುಷಗಳಿಗೆ ಮೇಲ್ಪಟ್ಟು ಈ ಕೆಳಗೆ ನಮೂದಾಗುವ ಸಬ್ ರಿಜಸ್ಟ್ರೀ ಆಫಿಸಿನಲ್ಲಿ ವಾರಸುದಾರು. ಹಾಜರಾಗಿ ವಾಪಸ್ ಪಡಿಯದೆ ನಿಂತಿರುತ್ತವೆ. ಈ ತಾರೀಖು ಲಾಗಾಯತು ವಂದು ತಿಂಗಳ ವಳಗಾಗಿ ಸದರೀ ತಂಸೂಕು ಹಾಜರ್ಮಾಡಿದವರಾಗಲಿ ಅವರ ಪ್ರತಿನಿಧಿಗಳಾಗಲಿ ಅಥವಾ ತಂಸೂಕುಗಳಿಗೆ ಬಾಧ್ಯತೆ ವುಳ್ಳವರಾಗಲಿ ಸಬ್ ರಿಜಸ್ಟ್ರೀ ಆಫಿಸಿನಲ್ಲಿ ಹ್ಹಾಜರಾಗಿ ತಮ್ಮ ದಸ್ತೈವಜುಗಳನ್ನ ವಾಪಸ್ ಪಡಿಯಬೇಕು. ತಪ್ಪಿದರೆ ರಿಜಸ್ಟ್ರೇಷನ್ ಆಕ್ಟು 85ನೇ ಸೆಕ್ಷನ್ ಮೇರಿಗೆ ಸದರೀ ದಸ್ತೈವಜುಗಳು ನಾಶ ಪಡಿಸಲ್ಪಡುತ್ತೆ.

ಸಬ್ ರಿಜಸ್ಟ್ರೀ ಆಫಿಸ್ ಹೆಸರು.	ಬುಕ್ಕು ಮತ್ತು ರಿಜಸ್ಟರ್ ನಂಬರು.	ಕಕ್ಷಿಗಾರರ ಹೆಸರು ವಗೈರೆ.		ದಸ್ತೈವಜು ತಾರೀಖು.	ರಿಜಸ್ಟ್ರಾದ ತಾರೀಖು.	ದಸ್ತೈವಜಿನ ಸ್ವಭಾವ.
		ತಂಸೂಕು ಬರದುಕೊಟ್ಟವ.	ತಂಸೂಕು ಬರಸಿಕೊಂಡವ.			
ಹರಿಹರ	1ನೇ ಬುಕ್ಕು ನಂ. 99 1893—94	ಕೊಡಿಯಾಲದ ಗಂಗವ್ವನ ಮಗ ನೀಲ	ನಾಡಿಗ ಚೀನಪ್ಪನ ಮಗ ಗುಡ್ಡಪ್ಪ ಪೈನೇರ ಗಾರ್ಡಿಯರ್ ಗುರಾಜಪ್ಪ	1—12—93	2—12—93	ಸಾಲಿಯಾನಾ 12 ರೂಪಾಯಿನಂತೆ 3 ವರುಷದ ವರಿಗೆ ಕೊಡುವದಾಗಿ ಗೇಣೀ ಕರಾರು.
	ಡಿಟ್ಟೋ ನಂ. 108 1893—94	ಸಾರಥಿ ಗ್ರಾಮದಲ್ಲಿ ಇರುವ ಪೂಜಾರಿ ಕರಿಯಪ್ಪನ ಮಗ ಪೂಜಪ್ಪ	ಸಾರಥಿ ಗ್ರಾಮದ ಕಬ್ಬ್ಯಾರ್ರೆ ಗಾಜಪ್ಪನ ಮಗ ನೀಲಪ್ಪ	26—12—93	26—12—93	20 ರೂಪಾಯಿನ ಸ್ಥಿರಸ್ವತ್ತಿನ ಸಕ್ರಯ ಪತ್ರ.

ಎಂ. ಎಸ್. ನಾರಾಯಣರಾವ್, ಡಿ॥ ರಿಜಸ್ಟ್ರಾರ್.

MYSORE GOVERNMENT CENTRAL PRESS, BANGALORE—1896.